ಸಿ.ಸಿ .ನಂ. 194/2022 ಪಿಡಬ್ಲೂಃ 1

ದಿನಾಂಕಃ 30-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

11. ಆರ್ ಟಿ ಜಿ ಎಸ್ ಮೂಲಕ ಆರೋಪಿಯ ಖಾತೆಗೆ ಸಂದಾಯ ಮಾಡಿದ್ದೆವು ಎಂದು ಹೇಳಿದ ಆರೋಪಿಯ ಖಾತೆ ಇರುವ ಬ್ಯಾಂಕಿನ ಹೆಸರು ನೆನಪಿಲ್ಲ. ಸಾಲದ ಸಂಪೂರ್ಣ ಹಣವನ್ನು ಸಂದಾಯ ಮಾಡಿರುತ್ತೇವೆ . ಆರ್ ಟಿ ಜಿ ಎಸ್ ಮೂಲಕ ಹಣ ಸಂದಾಯ ಮಾಡಿದ ಬಗ್ಗೆ ದಾಖಲಾತಿ ನಮ್ಮ ಬ್ಯಾಂಕಿನಲ್ಲಿ ಇರುತ್ತದೆ . ಈ ಪ್ರಕರಣದಲ್ಲಿ ನಮ್ಮ ಪ್ರಕರಣವನ್ನು ಪುರಾವೆ ಮಾಡಲು ಅವಶ್ಯವಿರುವ ಎಲ್ಲಾ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ. ಮತ್ತೇ ಹಾಜರು ಪಡಿಸುವಂತಹ ಯಾವುದೇ ದಾಖಲಾತಿಗಳು ಇಲ್ಲ . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 26-02-2021 ಕ್ಕೆ ಎಷ್ಟು ಹಣ ಸಂದಾಯವಾಗಿದೆ ನೆನಪಿಲ್ಲ. ದಿಃ 26-02-2021 ಕ್ಕೆ ಎಷ್ಟು ಹಣ ಸಂದಾಯವಾಗಿತ್ತು ಎಂದು ತೋರಿಸಲು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ದಿಃ 09-03-2022 ರಂದು ಕಾನುನಾುಬದ್ಧವಾಗಿ ಬರಬೇಕಾದ ಹಣ ಇಂತಿಷ್ಟು ಇತ್ತು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಸ್ಟೇಟಮೆಂಟ್ ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ . ಕಾನುನಾುಬದ್ಧವಾಗಿ ಬರಬೇಕಾದ ಹಣ ಎಂದು ತೋರಿಸಲು ಯಾವ ದಾಖಲಾತಿ ಹಾಜರು ಪಡಿಸಿದ್ದೀರಿ ಎಂದು ಸಾಕ್ಷಿಗೆ ಕೇಸಿನ ಕಡತದಲ್ಲಿರುವ ದಾಖಲಾತಿಗಳನ್ನು ತೋರಿಸಲಾಗಿ ನೋಟಿಸನ್ನು ಕೊಟ್ಟಿದ್ದೇವೆ ಎಂದು ನುಡಿದಿರುತ್ತಾರೆ . ಅಕೌಂಟ್ ಸ್ಟೇಟಮೆಂಟ್ ನಂತಹ ಯಾವುದೇ ದಾಖಲಾತಿ ಕಡತದಲ್ಲಿ ಇಲ್ಲ ಎಂದರೆ ಸರಿ . ಯಾವುದೇ ಸಾಲದ ಕುರಿತು ನಮಗೆ ಕಾನೂನುಬದ್ಧವಾಗಿ ಬರಬೇಕಾದ ಹಣದ ಬಗ್ಗೆ ನಿಖರವಾದ ದಾಖಲಾತಿ ಎಂದರೆ ಸ್ಟೇಟಮೆಂಟ್ ಎಂದರೆ ಸರಿ . ಅಂತಹ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ .

12. ರಾಜಾರಾಮ ಶಿವಾ ಭಟ್ ಇವರಿಗೆ ಸಂಬಂಧಪಟ್ಟಂತೆ ಯಾವುದಾದರೂ ಸಾಲದ ಖಾತೆ ಅಥವಾ ಜಾಮೀನುದಾರರ ಖಾತೆ ಈ ಪ್ರಕರಣ ಹೊರತು ಪಡಿಸಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಜಾಮೀನುದಾರರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ , ಸಾಕ್ಷಿ ನ್ಯಾಯಾಲಯದಲ್ಲಿ ಅವಶ್ಯಕತೆ ಬಿದ್ದರೆ ನ್ಯಾಯಾಲಯ ಹೇಳಿದರೆ ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ. ರಾಘವೇಂದ್ರ ದಯಾನಂದ ನಾಯ್ಕ ನಮ್ಮ ಬ್ಯಾಂಕಿನ ಅಧ್ಯಕ್ಷರು ಎಂದರೆ ಸರಿ . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಲವನ್ನು ಮರುಪಾವತಿಸುವುದು ದಿಃ 26-02-2021 ಕ್ಕೆ ದಯಾನಂದ ನಾಯ್ಕರವರ ಅಕೌಂಟಿಗೆ ಎಷ್ಟು ಹಣ ಸಂದಾಯವಾಗಿದೆ ಎಂದು ತೋರಿಸಲಲು ದಾಖಲಾತಿ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಅಧ್ಯಕ್ಷರ ಅಕೌಂಟಿಗೂ ಹಾಗೂ ಆರೋಪಿ ಹಾಕಿರುವ ಹಣಕ್ಕೂ ಸಂಬಂಧವಿಲ್ಲ ಎಂದು ನುಡಿದಿರುತ್ತಾರೆ . ಆ ಹಣದ ಕುರಿತಾಗಿ ಹೇಳಲು ರಾಘವೇಂದ್ರ ನಾಯ್ಕ ಹಾಗೂ ರಾಜಾರಾಮ ಭಟ್ ರವರು ಸೂಕ್ತ ವ್ಯಕ್ತಿಗಳು ಎಂದರೆ ಸರಿಯಲ್ಲ . ಆ ಹಣ ಸಂದಾಯವಾದ ಕುರಿತು ರಾಘವೇಂದ್ರ ದಯಾನಂದ ನಾಯ್ಕ ಹಾಗೂ ರಾಜಾರಾಮ ಭಟ್ ರವನ್ನು ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ರಾಜಾರಾಮ ಭಟ್ ರವರು ಹಾಕಿದದಂತಹ ಹಣ ನಮ್ಮ ಸಂಸ್ಥೆಗೆ ಬರುವಂತಹ ಹಣ ಅಲ್ಲ ಕಾರಣ ಅವರು ಬರುವ ಅವಶ್ಯಕತೆ ಇಲ್ಲ. ರಾಘವೇಂದ್ರ ನಾಯ್ಕ ನ್ಯಾಯಾಲಯಕ್ಕೆ ಬಂದರೆ ಈ ಪ್ರಕರಣದ ಸಂಪೂರ್ಣ ಹಣ ಚುಕ್ತಾ ಆಗಿರುವುದು ಕಂಡು ಬರುತ್ತದೆ , ಕಾರಣ ಅವರ ಸಾಕ್ಷಿ ವಿಚಾರಣೆ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಬ್ಯಾಂಕಿಗೆ ಸಂಬಂಧಪಟ್ಟಂತೆ ಹೆಚ್ಚುವರಿ ನ್ಯಾಯಾಲಯದಲ್ಲಿ ವಿಷ್ಣು ಪಟಗಾರ ರವರ ವಿರುದ್ಧ ಚೆಕ್ ಬೋನ್ಸ ಪ್ರಕರಣ ದಾಖಲಿಸಿದ್ದೆವು ಎಂದರೆ ಸರಿ . ಆ ಪ್ರಕರಣದಲ್ಲಿಯೂ ಸಹ ವಿಷ್ಣು ಪಟಗಾರರವರು ಕೂಡ ರಾಘವೇಂದ್ರ ನಾಯ್ಕರವರಿಗೆ ಹಣ ಸಂದಾಯ ಮಾಡಿದ ಬಗ್ಗೆ ದಾಖಲಾತಿ ಹಾಜರು ಪಡಿಸಿದ್ದೆವು ಎಂದರೆ ಸಾಕ್ಷಿ ರಾಘವೇಂದ್ರ ನಾಯ್ಕ ತುಂಬಾ ಜನ ಇದ್ದಾರೆ ನಮ್ಮ ಅಧ್ಯಕ್ಷರ ಖಾತೆಗೆ ಹಣ ಬಂದಿಲ್ಲ ಎಂದು ನುಡಿದಿರುತ್ತಾರೆ . ರಾಘವೇಂದ್ರ

ನಾಯ್ಕ ರವರ ಖಾತೆಗೆ ಎಷ್ಟು ಹಣ ಬಂದಿದೆ ಎಂದು ದಾಖಲಾತಿ ಹಾಜರು ಪಡಿಸಿದ್ದಾರೆ ನೆನಪಿಲ್ಲ . ಆ ಪ್ರಕರಣವನ್ನು ನಾನೇ ಪ್ರತಿನಿಧಿಸಿರುತ್ತೇನೆ ಎಂದರೆ ಸರಿ . ಆ ಪ್ರಕರಣದಲ್ಲಿ ವಿಷ್ಣು ಪಟಗಾರ ರವರು ರಾಘವೇಂದ್ರ ನಾಯ್ಕರವರಿಗೆ ಹಣ ಸಂದಾಯ ಮಾಡಿದ ಬಗ್ಗೆ ದಾಖಲಾತಿ ಹಾಜರು ಪಡಿಸಿದ್ದಾರೆ ಎಂದರೆ ಸಾಕ್ಷಿ ಅವರು ರಾಘವೇಂದ್ರ ನಾಯ್ಕ ಎಂದು ದಾಖಲಾತಿ ತಂದಿದ್ದಾರೆ ಆದರೆ ಅದು ನಮ್ಮ ಅಧ್ಯಕ್ಷರಿಗೆ ಸಂಬಂಧಪಟ್ಟಿಲ್ಲ. ಆ ದಾಖಲಾತಿಯನ್ನು ನಾನು ನೋಡಿದ್ದೇನೆ . ಅದು ನಮ್ಮ ಅಧ್ಯಕ್ಷರಿಗೆ ಸಂಬಂಧಪಟ್ಟಿಲ್ಲ. ಅದರಲ್ಲಿ ಎಷ್ಟು ಮೊತ್ತ ಸಂದಾಯವಾಗಿದೆ ಎಂದು ಇದೆ ನನಗೆ ನೆನಪಿಲ್ಲ. ಈ ಪ್ರಕರಣದಲ್ಲಿಯೂ ಕೂಡ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ರಾಜಾರಾಮ ಭಟ್ ರವರು ನಮ್ಮ ಅಧ್ಯಕ್ಷರಿಗೆ ದಿಃ 26-02-2021 ರಂದು ಹಣ ಸಂದಾಯ ಮಾಡಿದ್ದಾರೆ ಎಂದರೆ ಗೊತ್ತಿಲ್ಲ . ಅದೇ ಕಾರಣಕ್ಕೆ ನಾವು ಈ ಪ್ರಕರಣದ ಅಕೌಂಟ್ ಸ್ಟೆಟಮೆಂಟ್ ನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನಾವು ಮಾಡಿದ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸುವ ಪ್ರವೃತ್ತಿಯನ್ನು ಹೊಂದಿದವರಾಗಿರುತ್ತೇವೆ ಎಂದರೆ ಸರಿಯಲ್ಲ. ಆರ್ ಟಿ ಜಿ ಎಸ್ ಮೂಲಕ ಹಣ ಸಂದಾಯ ಮಾಡಿದ ದಾಖಲಾತಿ ನ್ಯಾಯಾಲಯಕ್ಕೆ ಅವಶ್ಯಕತೆ ಬಿದ್ದರೆ ಹಾಜರು ಪಡಿಸುತ್ತೇನೆ . ಆರ್ ಟಿ ಜಿ ಎಸಿ ಮೂಲಕ ಸಂದಾಯ ಮಾಡಿದ ಮೊತ್ತ ನೆನಪಿಲ್ಲ . ಸರಿಯಾಗಿ ನೆನಪಿಟ್ಟುಕೊಂಡು ನನ್ನನ್ನು ಹೊರತು ಪಡಿಸಿ ಸಾಕ್ಷಿ ಹೇಳುವವರು ಬೇರೆ ಯಾರಿದ್ದಾರೆ ಎಂದರೆ ಸಾಕ್ಷಿ ನಾನೇ ಎಂದು ನುಡಿದಿರುತ್ತಾರೆ . ನಾನು ಸಂದರ್ಭಕ್ಕೆ ತಕ್ಕಂತೆ ಸುಳ್ಳು ಪ್ರಕರಣ ಸಮರ್ಥಿಸಲು ಗೊತ್ತಿಲ್ಲ , ನೆನಪಿಲ್ಲ ಎಂದು ಉತ್ತರ ಕೊಡುತ್ತೇನೆ ಎಂದರೆ ಸರಿಯಲ್ಲ . ನಾನು ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಟ್ಟರೆ ನಿಜ ಸಂಗತಿ ಹೊರ ಬರುತ್ತದೆ ಆ ಕಾರಣ ನಾನು ಗೊತ್ತಿಲ್ಲ , ನೆನಪಿಲ್ಲ ಎಂದು ಹೇಳುತ್ತೇನೆ ಎಂದರೆ ಸರಿಯಲ್ಲ. ಆರ್ ಟಿ ಜಿ ಎಸ್ ಹಣ ಸಂದಾಯ ಆದ ಬಗ್ಗೆ ಹೇಳುವ ನಿಖರವಾದ ದಾಖಲಾತಿ ಎಂದರೆ ಸರಿ . ಈ ಪ್ರಕರಣದಲ್ಲಿ 5,50,000/- ರೂ.ಗಳಿಗೆ ಬಡ್ಡಿ ಆಕರಣೆ ಮಾಡಿದ್ದೇವೆ . ನಮ್ಮ ಪ್ರಕಾರ ಇದು ಓಡಿ ಸಾಲ ಅಲ್ಲ. ಒಂದೇ ಬಾರಿ ಸಂದಾಯ ಮಾಡಿರುವ ಸಾಲ . ನಮ್ಮ ಬ್ಯಾಂಕಿನ ಅಧ್ಯಕ್ಷರು ಸಾಲಗಾರರು ಹಾಗೂ ಜಾಮೀನುದಾರರು ಹಾಕುವಂತಹ ಹಣವನ್ನು ಒಂದು ಟೈಮ್

settlement ಕಡಿಮೆ ಮಾಡಿಕೊಡುತ್ತೇನೆ ಎಂದು ಸಾಲದಲ್ಲಿ ಸಂದಾಯ ಮಾಡಬೇಕಾದಂತಹ ಹಣವನ್ನು ತನ್ನ ಖಾತೆಗೆ ಹಾಕಿಸಿಕೊಂಡು ಮೋಸ ಮಾಡುವ ಹವ್ಯಾಸ ಹೊಂದಿದ್ದಾರೆ ಎಂದರೆ ಸರಿಯಲ್ಲ . ಅದೇ ಕಾರಣಕ್ಕೆ ಆ ರೀತಿ ದಾಖಲಾದ ಪ್ರಕರಣದಲ್ಲಿ ಆರೋಪಿತರು ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯದಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.